ಸಚಿವಾಲಯದ ಸಿಬ್ಬಂದಿಯವರಿಗೆ ಏರ್ಪಡಿಸಿದ್ದ ಸಂತೋಷ ಕೂಟದ ಬಗ್ಗೆ.

೧೭೫೧. ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಖ್ಯ ಮಂತ್ರಿಗಳು ಇತ್ತೀಚೆಗೆ ಸಚಿವಾಲಯದ ಸಿಬ್ಬಂದಿಯವರಿಗೆ ಸಂತೋಷ ಕೂಟ ಏರ್ಪಡಿಸಿದ್ದಾಗ, ಸಿಬ್ಬಂದಿ ವರ್ಗದವರು ಈ ಕೂಟವನ್ನು ಬಹಿಷ್ಕರಿಸಿದ್ದು ನಿಜವೇ ?

ಆ) ಅದಕ್ಕೆ ಕಾರಣಗಳೇನು ಹಾಗೂ ಈ ಬಹಿಷ್ಕಾರ ದಿಂದ ಸರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಟ ಎಷ್ಟು ?

ಇ) ಇಡೀ ರಾಜ್ಯವೇ ಭೀಕರ ಬರಗಾಲದಲ್ಲಿ ನರಳುತ್ತಿರುವಾಗ ಇಂತಹ ಸಂತೋಷ ಕೂಟಗಳನ್ನು ಏರ್ಪಡಿಸುವ ಅಗತ್ಯವಿತ್ತೇ ?

ಈ) ಕಳೆದ ಮೂರು ವರ್ಷಗಳಿಂದಲೂ ಬರೀ ಸಚಿವಾಲಯದ ನೌಕರರಿಗೆ ಮಾತ್ರ ಸಂತೋಷ ಕೂಟ ಏರ್ಪಡಿಸುತ್ತಿರುವುದರ ಔಚಿತ್ಯವೇನು ? ಹಿಂದಿನ ಸರಕಾರಗಳೇನಾದರೂ ಇಂತಹ ಸಂತೋಷ ಕೂಟಗಳನ್ನು ನಡೆಸಿದ್ದರೆ ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳು).—

ಅ) ಕೆಲವು ಸಿಬ್ಬಂದಿ ವರ್ಗದವರು ಮಾತ್ರ ಸಂತೊಷ ಕೂಟದಲ್ಲಿ ಭಾಗವಹಿಸಿದ್ದರು.

ಆ) ಇದು ಸಚಿವಾಲಯದಲ್ಲಿ ಕೆಲವು ಅಧಿಕಾರಿಗಳನ್ನು ಸರ್ಕಾರವು ಅಮಾನತ್ತಿನಲ್ಲಿಟ್ಟಿದ್ದರಿಂದ ಉದ್ಭವಿಸಿತು. ರಾಜ್ಯಕ್ಕೆ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ.

ಇ) ಈಗ್ಗೆ ಮೂರು ವರ್ಷಗಳಿಂದ ಈ ರೀತಿ ವರ್ಷಕ್ಕೊಮ್ಮೆ ಸಚಿವಾಲಯದ ಎಲ್ಲ ನೌಕರರು, ಅಧಿಕಾರಿಗಳು ಹಾಗು ಸಚಿವರುಗಳು ಒಟ್ಟಾಗಿ ಕಲೆಯುವುದು ಪದ್ಧತಿಯಾಗಿದೆ.

ಈ) ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿಯೂ ಕೂಡ ಇಂತಹ ಸಂತೋಷ ಕೂಟವನ್ನು ಏರ್ಪಡಿಸುವ ವಿಚಾರವನ್ನು ಸರ್ಕಾರ ಪರಿಶೀಲಿಸುತ್ತಿದೆ. ಹಿಂದಿನ ಸರ್ಕಾರಗಳು ಇಂತಹ ಸಂತೋಷ ಕೂಟವನ್ನು ಏರ್ಪಡಿಸಿರುವುದಿಲ್ಲ.

ಕೆರೆಗಳಲ್ಲಿ ಹೂಳೆತ್ತುವ ಹಾಗೂ ಒತ್ತುವರಿ ತೆರವು ಮಾಡಿಸುವ ವಿಷಯ

೧೭೬೯. ಶ್ರೀ ಕೆ. ಎಂ. ಮುನಿಯಪ್ಪ (ಚಿಕ್ಕಬಳ್ಳಾಪುರ).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯಾದಂತ ಕೆರೆಗಳಲ್ಲಿ ಹೂಳು ತೆಗೆಯುವ ಕಾರ್ಯದ ಬಗ್ಗೆ ಸರಕಾರದವರು ಕಾರ್ಯ ಕ್ರಮವನ್ನೇನಾದರೂ ರೂಪಿಸಿದ್ದಾರೆಯೆ, ಹಾಗೂ ಕೆರೆಗಳನ್ನು ಅಕ್ರಮವಾಗಿ ಒತ್ತುವರಿ ಮಾಡಿರುವವರ ಮೇಲೆ ಏನು ಕ್ರಮವನ್ನು ಕೈಗೊಂಡಿದ್ದಾರೆ ?

ಶ್ರೀ ಪೆಜ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕೆರೆಗಳಲ್ಲಿ ಹೂಳು ತೆಗೆಯುವ ಬಗ್ಗೆ ಕಾರ್ಯಕ್ರಮಗಳನ್ನು ರೂಪಿಸಲು ಸಂತೋಲೆಯ ಮೂಲಕ ಸೂಚನೆಗಳನ್ನು ನೀಡಲಾಗಿದೆ. ಕೆರೆಗಳ ಅಕ್ರಮ ಒತ್ತುವರಿ ಬಿಡುಗಡೆ ಬಗ್ಗೆ ಕಂದಾಯ ಇಲಾಖೆಯ ಅಧಿಕಾರಿಗಳೊಡನೆ ವ್ಯವಹರಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.